 

ಮೂಲ: **ಪಾಲಗುಮ್ಮಿ ಪದ್ಮರಾಜು**

ಕನ್ನಡಕ್ಕೆ: **ಸ. ರಘುನಾಥ**

ಕಲೆ: ರಾಮಕೃಷ್ಣ ಸಿದ್ರಪಾಲ



ಮೋಡಗತ್ತಲು ಕವಿಯಿತು. ರೈಲು ಬಹಳ ತಡಮಾಡಿ ಬಂದಿತು. ರಾವು ಅವರು ಎರಡನೇ ದರ್ಜೆಯ ಬೋಗಿಗೆ ಏರುತ್ತಿದ್ದಾಗ, ಅವರಿಗೆ ತಮ್ಮ ಮನೆ, ಆ ಮನೆಯಲ್ಲಿ ರೂಢಿಯಾದ ಸುಖ, ಎಲ್ಲ ನೆನಪಾದವು.

ಅವರು ಓದುವ ಕೋಣೆ ಅತಿ ಚೊಕ್ಕಟವಾಗಿ ಒರೆಸಿರುತ್ತಿತ್ತು. ಅದರಲ್ಲಿ ಸಾಗುವಾನಿ ಮರದ ಚೇಗಿನಿಂದ ಮಾಡಿದ ಕಲ್ಲಿನ ಮೇಜು, ಅದರ ಮೇಲೆ ಒಂದು ಮೂಲೆಯಲ್ಲಿ ಒಂದು ಎಲೆಹಸಿರು ಕೊಳವೆಯಲ್ಲಿ ದೀಪ ಬೆಳಗುತ್ತಿತ್ತು. ಆತ ಕುರ್ಚಿಯಲ್ಲಿ ಕುಳಿತುಕೊಳ್ಳುವ ಜಾಗದಲ್ಲಿ ಅನುಕೂಲಕರವಾದ ಮೆತ್ತನೆಯ ಉಬ್ಬುಗಳಿದ್ದವು. ಸೋಫಾದಲ್ಲಿ ಇರುವುದೂ ತಿಳಿಯದಂತೆ ಅವರ ಮಡದಿ ಕುಳಿತಿರುತ್ತಾಳೆ. ಅವರಿಗೆ ನಾಲ್ಕು ಜನ ಮಕ್ಕಳು. ಎರಡು ಹೆಣ್ಣು, ಎರಡು ಗಂಡು. ಅವರನ್ನು ಕಂಡರೆ ಇವರಿಗೆ ಬಹಳ ಹೆಮ್ಮೆ.

ರೈಲು ಬೋಗಿಯಲ್ಲಿ ಮೂರು ಬರ್ತುಗಳನ್ನೂ ಯಾರೋ ಆಕ್ರಮಿಸಿ ಹಾಸಿಗೆಗಳನ್ನು ಹಾಸಿಕೊಂಡಿದ್ದರು. ತಾನು ಹತ್ತಿದ್ದಕ್ಕೆ ಅದರಲ್ಲಿದ್ದ ನಾಲ್ಕು ಜನ ಪ್ರಯಾಣಿಕರು ಬೇಸರಿಸಿದಂತೆ, ರಾವು ಅವರು ಅವರ ಮುಖಗಳನ್ನು ನೋಡದೆಯೇ ಗ್ರಹಿಸಿದರು. ಇನ್ನೊಂದು ಬೋಗಿಗೆ ಹೋದರೆ ಚೆನ್ನಾಗಿರುವುದೆಂದು ಅವರಿಗೆ ಅನ್ನಿಸಿತು.